**ಕರ್ನಾಟಕ ಸರ್ಕಾರ**

**(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)**

**3ನೇ ಮಹಡಿ, ಬಹುಮಹಡಿ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು**

**ಸಂಖ್ಯೆ:ಎನ್‌ಹೆಚ್‌ಎಂ/ಡಿಡಿ/ಐಎಂಎಂ/34/2020-21** **ದಿನಾಂಕ:22.10.2021**

**ಜಂಟಿ ಸುತ್ತೋಲೆ**

ವಿಷಯ: ಕೋವಿಡ್-19 ಲಸಿಕಾಕರಣವನ್ನು ತೀವ್ರಗೊಳಸಲು ಸಹಕಾರ ಕೋರುವ ಕುರಿತು.

ಉಲ್ಲೇಖ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸುತ್ತೋಲೆ ಸಂಖ್ಯೆ: ಕಪಂರಾಅ:ಅಭಿವೃದ್ಧಿ:143:2021 ದಿನಾಂಕ: 18.03.2021

*******

ರಾಜ್ಯದಲ್ಲಿ ಕೋವಿಡ್-19 ಅನ್ನು ನಿಗ್ರಹಿಸುವಲ್ಲಿ ಕೋವಿಡ್-19 ಲಸಿಕಾಕರಣವು ಅತ್ಯಂತ ಪರಿಣಾಮಕಾರಿ ಅಸ್ತ್ರವಾಗಿದೆ. ತಮ್ಮೆಲ್ಲರ ಸಹಕಾರದಿಂದ ರಾಜ್ಯವು ಗಮನಾರ್ಹ ಪ್ರಗತಿ ಸಾಧಿಸಿದೆ. ಇದುವರೆಗೆ ರಾಜ್ಯದಲ್ಲಿ ಸರಾಸರಿ ಶೇ.81 ರಷ್ಟು ಜನರಿಗೆ ಮೊದಲ ಡೋಸ್ ಹಾಗೂ ಶೇ.37 ರಷ್ಟು ಜನರಿಗೆ ಎರಡನೇ ಡೋಸ್ ಲಸಿಕಾಕರಣ ನಡೆಸಲಾಗಿದೆ. ನಮ್ಮ ಮುಂದಿನ ನಡೆಯು ಉಳಿಕೆ ಫಲಾನುಭವಿಗಳಿಗೆ ಲಸಿಕಾಕರಣ ನಡೆಸುವುದಾಗಿರುತ್ತದೆ ಮತ್ತು ಇದನ್ನು ಸಾಧಿಸಲು ಅನೇಕ ಸವಾಲುಗಳು ನಮ್ಮ ಮುಂದಿವೆ. (ಉದಾಹರಣೆಗೆ ಲಸಿಕಾಕರಣದ ನಿರಾಕರಣೆ/ಹಿಂಜರಿಕೆ/ ಅಲೆಮಾರಿ ಜನಾಂಗ ಇತ್ಯಾದಿ) ಇವುಗಳನ್ನು ಯಶಸ್ವಿಯಾಗಿ ಮೆಟ್ಟಿ ಸಂಭಾವ್ಯ ಕೋವಿಡ್-19 ನ 3ನೇ ಅಲೆಯಿಂದ ರಾಜ್ಯದಲ್ಲಿನ ಜನರನ್ನು ರಕ್ಷಿಸುವ ಸಲುವಾಗಿ ಸುತ್ತೋಲೆಗೆ ಮುಂದುವರೆದಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಕೋರಿದೆ.

- ಕೋವಿಡ್-19 ಲಸಿಕಾಕರಣದ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಗ್ರಾಮ ಸಭೆಗಳನ್ನು ಆಯೋಜಿಸುವುದು. ಕೋವಿಡ್ ಲಸಿಕಾಕರಣ ಕುರಿತು ಪೋಸ್ಟರ್ ಗಳನ್ನು ಪ್ರಿಂಟ್ ಮಾಡಿಸಿ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ಅಂಟಿಸುವುದು.
- ಕೋವಿಡ್-19 ಲಸಿಕಾಕರಣವನ್ನು ಸಕ್ರಿಯವಾಗಿ ಅನುಷ್ಠಾನಗೊಳಿಸಲು ಗ್ರಾಮ ಮಟ್ಟದ ಕಾರ್ಯಪಡೆಗಳು ಅರ್ಹ ಫಲಾನುಭವಿಗಳನ್ನು ಕೋವಿಡ್-19 ಲಸಿಕಾ ಕೇಂದ್ರಗಳಿಗೆ ರವಾನಿಸಲು ಸಾರಿಗೆ ವ್ಯವಸ್ಥೆ ನೀಡುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆಯು ಗ್ರಾಮದಲ್ಲಿ ಲಸಿಕಾಕರಣ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಾಯವಾಣಿಯನ್ನು (Help line) ಜಾರಿಗೊಳಿಸುವುದು ಹಾಗೂ ಈ ಸಹಾಯವಾಣಿಯ ಮೂಲಕ ಲಸಿಕೆಯನ್ನು ಯಾವಾಗ, ಎಲ್ಲಿ ಮತ್ತು ಹೇಗೆ ಪಡೆಯುವುದು ಹಾಗೂ ಲಸಿಕಾಕರಣದ ವೇಳಾಪಟ್ಟಿಯೊಂದಿಗೆ ದಿನ, ಸಮಯ ಹಾಗೂ ಸ್ಥಳವನ್ನು ಸಾರ್ವಜನಿಕರಿಗೆ ಪ್ರಚುರಪಡಿಸುವುದು.
- ಆಯಾ ಗ್ರಾಮದಲ್ಲಿನ 18 ವರ್ಷ ಮೇಲ್ಪಟ್ಟ ಇನ್ನೂ ಲಸಿಕೆ ಪಡೆಯದ ಫಲಾನುಭವಿಗಳ ಪಟ್ಟಿಯನ್ನು ಆರೋಗ್ಯ ಇಲಾಖೆಗೆ ಒದಗಿಸುವುದು ಮತ್ತು ಲಸಿಕೆ ಪಡೆದಿರುವುದರ ಕುರಿತು ಖಾತರಿಪಡಿಸಿಕೊಳ್ಳುವುದು. ಲಸಿಕೆ ಪಡೆಯದಿರಲು ಜನರಲ್ಲಿ ಇರಬಹುದಾದ ಮಾಹಿತಿ ಕೊರತೆ, ತಪ್ಪು ಕಲ್ಪನೆ, ದಿನಗೂಲಿ ನಷ್ಟ ಅಥವಾ ಇನ್ನಾವುದೇ ಅಂಶಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸಹಕರಿಸುವುದು.

- ಕೋವಿಡ್-19 ಲಸಿಕಾಕರಣವನ್ನು ಸುಗಮಗೊಳಿಸಲು ಚುನಾಯಿತ ಪ್ರತಿನಿಧಿಗಳು ಗ್ರಾಮದ ಮುಖಂಡರು, ಧಾರ್ಮಿಕ ಮುಖಂಡರು, ಸ್ವಯಂ ಸೇವಕರು ಮತ್ತು ಸ್ವಸಹಾಯ ಗುಂಪುಗಳ ಸದಸ್ಯರನ್ನೊಳಗೊಂಡ ಸಭೆಯನ್ನು ನಡೆಸಿ ಲಸಿಕಾಕರಣದ ಕುರಿತು ಅರಿವು ಮೂಡಿಸುವುದು.
- ಪಂಚಾಯತ್ ರಾಜ್ ಸದಸ್ಯರುಗಳು ಫಲಾನುಭವಿಗಳಿಗೆ ಲಸಿಕೆ ಪಡೆಯುವಂತೆ ಪ್ರೇರೇಪಿಸುವುದು.
- ಮೈಕಿಂಗ್, ಪ್ರಮುಖ ಸ್ಥಳಗಳಲ್ಲಿ ಪೋಸ್ಟರ್ ಮತ್ತು ಬ್ಯಾನರ್‌ಗಳನ್ನು ಅಳವಡಿಸುವುದು, ಹೆಲ್ಪ್ ಡೆಸ್ಕ್ ಮತ್ತು ಟಾಂಟಾಂ ಮೂಲಕ ಕೋವಿಡ್-19 ಲಸಿಕಾಕರಣದ ಕುರಿತು ಸಕಾರಾತ್ಮಕ ಸುದ್ಧಿಗಳನ್ನು ಪ್ರಚಾರಗೊಳಿಸುವ ಮೂಲಕ ಸಮುದಾಯದಲ್ಲಿ ಅರಿವು ಮೂಡಿಸುವುದು ಮತ್ತು ಮಸೀದಿಗಳಲ್ಲಿ ಕೋವಿಡ್-19 ಲಸಿಕೆ ಕುರಿತು ಘೋಷಿಸುವುದು.
- ಕೊಳಚೆ ಪ್ರದೇಶಗಳ ವಾಸಿಗರು, ಅಲೆಮಾರಿ ಜನಾಂಗ, ಒಂಟಿ ಮನೆಗಳಲ್ಲಿನ ವಾಸಿಸುವ, ನಿರ್ಗತಿಕರನ್ನು ಮತ್ತು ತೃತಿಯ ಲಿಂಗಿಗಳನ್ನು ಗುರುತಿಸುವಲ್ಲಿ ಆರೋಗ್ಯ ಇಲಾಖೆಗೆ ಬೆಂಬಲಿಸುವುದು ಹಾಗೂ ಲಸಿಕಾಕರಣಕ್ಕೆ ಮನವೊಲಿಸಿ ಫಲಾನುಭವಿಗಳನ್ನು ಸಜ್ಜುಗೊಳಿಸುವುದು.
- ವಿಕಲಚೇತನರು, ಮಾನಸಿಕ ಅಸ್ವಸ್ಥತೆ ಹೊಂದಿರುವವರು, ವೃದ್ಧಾಶ್ರಮ ವಾಸಿಗಳು ಮತ್ತು ಹಾಸಿಗೆ ಹಿಡಿದಿರುವ ಜನರನ್ನು ಗುರುತಿಸಿ ಅವರುಗಳ ನಿವಾಸದಲ್ಲಿಯೇ ಲಸಿಕಾಕರಣ ನಡೆಸುವಲ್ಲಿ ಆರೋಗ್ಯ ಇಲಾಖೆಗೆ ಸಹಕಾರ ನೀಡುವುದು.
- ಹೆಚ್ಚಾಗಿ ಲಸಿಕೆ ಹಿಂಜರಿಕೆ ಇರುವ ಜನಾಂಗ ಮತ್ತು ಗ್ರಾಮಗಳಲ್ಲಿ ವಿಶೇಷ ಸಂವಹನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಲಸಿಕಾ ಸತ್ರಗಳಿಗೆ ಮಾಸ್ಕ್, ಸ್ಯಾನಿಟೈಸರ್/ಸಾಬೂನುಗಳನ್ನು ಒದಗಿಸುವುದು.
- ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಲಸಿಕಾ ಕೇಂದ್ರಗಳಲ್ಲಿ ನೆರವು ನೀಡಲು ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಒದಗಿಸುವುದು ಮತ್ತು ಲಸಿಕಾಕರಣ ಪ್ರಮಾಣಪತ್ರದ ಮುದ್ರಣವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.

**ಪ್ರತಿ ಗ್ರಾಮವನ್ನು ಶೇ.100 ರಷ್ಟು ಲಸಿಕೆ ಪಡೆದ ಗ್ರಾಮವನ್ನಾಗಿ ಪರಿವರ್ತಿಸಲು ತಮ್ಮ ಅತ್ಯಮೂಲ್ಯ ಬೆಂಬಲ ಹಾಗೂ ಸಹಕಾರ ಕೋರಿದೆ**

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ,

1. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ.
2. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು.
3. ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕಾಧಿಕಾರಿಗಳು (ಜಿಲ್ಲಾ ಪಂಚಾಯತ್ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ ಮುಖಾಂತರ)
4. ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,(ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕಾಧಿಕಾರಿಗಳ ಮುಖಾಂತರ)

ಪ್ರತಿಯನ್ನು ಮಾಹಿತಿಗಾಗಿ:

1. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.ಬೆಂಗಳೂರು.
6. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.